ಚಿತ್ರಕಥಾಪಟ

# ಯಾರು ಹೆಚ್ಚು

೨




ರಚನೆ: ಸೋಮು ಕುದರಿಹಾಳ
ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ಶಿಂಗಾಪುರ, ಹಾವೇರಿ

ಚಿತ್ರಗಳು: ಕೆ. ಬಿ. ದೊಡ್ಡಮನಿ
ಪ್ರಧಾನ ಗುರುಗಳು, ಸ.ಹಿ.ಪ್ರಾ.ಶಾಲೆ,
ಶಿಂಗಾಪುರ, ಹಾವೇರಿ


**ಶಿಕ್ಷಕರಲ್ಲಿ ನಿವೇದನೆ:**
ಈ ವಿಶಿಷ್ಟ ಚಿತ್ರಕಥಾಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಒಮ್ಮೆ ಓದಿ ಹೇಳಿ. ಹೇಳುತ್ತಲೇ ಕಥೆ ಆಧರಿಸಿ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors

ರಾಮುಗೆ ಚಿತ್ರ ಬರೆಯುವುದು, ಬಣ್ಣ ಹಚ್ಚುವುದು ಎಂದರೆ ತುಂಬಾ ಇಷ್ಟ. ಒಂದು ದಿನ ರಾಮು ತನ್ನ ಶಾಲಾ ಬ್ಯಾಗನ್ನು ತೆಗೆದುಕೊಂಡು, ಅದರಲ್ಲಿನ ನೋಟುಪುಸ್ತಕ ಮತ್ತು ಜಾಮಿಟ್ರಿ ಬಾಕ್ಸ್‌ನಲ್ಲಿನ ಪೆನ್ಸಿಲ್‌ನ್ನು ತೆಗೆದುಕೊಂಡು, ಒಂದು ಚಿತ್ರವನ್ನು ತೆಗೆಯಲು ಪ್ರಾರಂಭಿಸಿದ. ಅಷ್ಟರಲ್ಲಿ, ಅವನಿಗೆ ಏನೋ ನೆನಪಾಗಿ ಎಲ್ಲವನ್ನೂ ಹಾಗೆ ಬಿಟ್ಟು, ಹೊರಗಡೆ ನಡೆದ.





ಇದನೆಲ್ಲಾ ಗಮನಿಸುತ್ತಿದ್ದ, ಜಾಮಿಟ್ರಿ ಬಾಕ್ಸ್, ಪೆನ್ನು, ಪೆನ್ಸಿಲ್, ಕ್ರೆಯಾನ್ಸ್, ರಬ್ಬರ್, ನೋಟ್‌ಪುಸ್ತಕ, ಶಾರ್ಪನರ್, ಕಡ್ಡಿಗಳು, ಕಲ್ಲುಗಳು, ಹುಣಸೆಬೀಜ ಎಲ್ಲವೂ ತಮ್ಮತಮ್ಮಲ್ಲಿಯೇ ಇದ್ದ 'ನಾನು ಹೆಚ್ಚು, ನಾನು ಹೆಚ್ಚು' ಎಂದು ಜಗಳವಾಡಲು ಪ್ರಾರಂಭಿಸಿದವು.



ತಾನೇ ಶ್ರೇಷ್ಠ ಎಂಬ ಭಾವದಿಂದ ಜಾಮಿಟ್ರಿ ಬಾಕ್ಸ್ ಮೊದಲು ಮಾತಿಗಿಳಿಯಿತು. 'ನಾನಿಲ್ಲದಿದ್ದರೆ ನಿಮಗಾರಿಗೂ ಆಶ್ರಯವಿಲ್ಲ, ಎಲ್ಲೇಲ್ಲೊ ಬಿದ್ದು ಹೋಗುತ್ತೀರಿ. ಹಾಗಾಗಿ ನಾನೇ ಹೆಚ್ಚು.' ಎಂದು ಹೇಳಿತು.

ಆಗ ಪೆನ್ನು ಎದ್ದು ನಿಂತು ಟೋಪಿ ಸರಿ ಮಾಡಿಕೊಂಡು,'ಬಹಳ ಜನ ಹೇಳುತ್ತಾರೆ, ಖಡ್ಗಕ್ಕಿಂತ ಪೆನ್ನು ಹರಿತವಾದದ್ದು ಅಂತ. ಹಾಗಾಗಿ ನಾನೇ ಹೆಚ್ಚು.' ಎಂದಿತು.

ಅದರತ್ತ ವ್ಯಂಗ್ಯದ ನಗೆ ಬೀರುತ್ತಾ,'ನಿನಗೆ ಒಂದೋ ಎರಡೋ ಮೂರೋ ಬಣ್ಣಗಳಷ್ಟೇ, ನಾವು ಒಬ್ಬೊಬ್ಬರಿದ್ದರೆ ಒಂದೊಂದು ಬಣ್ಣ. ಒಬ್ಬರಿಗೊಬ್ಬರು ಸೇರಿದರೆ ನೂರಾರು ಬಣ್ಣ. ಚಿತ್ರಗಳ ಅಂದಚಂದಕ್ಕೆ ನಾವೇ ಬೇಕು.' ಎಂದು ಹೇಳುತ್ತಾ ಕ್ರೇಯಾನ್‌ಗಳು ತಮಗೆ ತಾವೇ ಚಪ್ಪಾಳೆ ಹೊಡೆದುಕೊಂಡವು.





ಅಷ್ಟೊತ್ತು ಸುಮ್ಮನಿದ್ದ ಪೆನ್ಸಿಲ್,‘ಯಾರೇ ಆಗಲಿ ಬರಹ ಕಲಿಯಲು ಚಿತ್ರ ಬಿಡಿಸಲು ಮೊದಲು ನನ್ನನ್ನೇ ಬಳಸುತ್ತಾರೆ. ನಾನೇ ಮೊದಲಿಗ ನಾನೇ ಹೆಚ್ಚು.’ ಎಂದು ಬೀಗುತ್ತಾ ತನ್ನ ಮೊನಚಿನಿಂದ ಎಲ್ಲರ ಮನಸ್ಸನ್ನು ತಿವಿಯಿತು.’

‘ಓಹೋಹೋ ನನ್ನನ್ನು ಕೆತ್ತಲು ಬಳಸಿಕೊಳ್ಳದಿದ್ದರೆ ನೀನೆಲ್ಲಿ ಚೂಪಾಗುತ್ತೀಯಾ? ಹಾಗಾಗಿ ನಿನಗಿಂತ ನಾನೇ ಮೊದಲಿಗ.’ ಎಂದು ಕೂಗತೊಡಗಿತು ಶಾರ್ಪನರ್.

ಮುದ್ದೆಯಂತೆ ಕುಳಿತಿದ್ದ ರಬ್ಬರ್,'ನೋಡ್ರಪ್ಪಾ ನಿಮ್ಮಿಂದ ಏನೇ ರಚನೆಯಾದರೂ ಒಂದು ಕ್ಷಣದಲ್ಲಿ ನಿಮ್ಮನ್ನು ಇಲ್ಲವಾಗಿಸುವ ಶಕ್ತಿ ನನಗಿದೆ. ನಾನೇ ಹೆಚ್ಚು.' ಎಂದಿತು.

ಎಲ್ಲರ ಮಾತು ಕೇಳಿಸಿಕೊಂಡ ಪುಸ್ತಕ,'ನನ್ನನ್ನು ದೇವರೆಂದು ಪೂಜಿಸುತ್ತಾರೆ. ನಿಮ್ಮೆಲ್ಲರನ್ನು ಬಳಸಲು ನಾನೇ ರಣರಂಗ ನಾನೇ ಪ್ರಮುಖ ಅಂಗ. ಹಾಗಾಗಿ ನನಗಿಂತ ನೀವ್ಯಾರು ಹೆಚ್ಚಲ್ಲ.' ಎಂದು ಪುಟಗಳನ್ನೆಲ್ಲ ಪಟರುಗುಟ್ಟಿಸಿತು.





ತಮ್ಮ ಸಮಯಕ್ಕೆ ಕಾಯುತ್ತಿದ್ದ ಕಲ್ಲು, ಕಡ್ಡಿ, ಹುಣಸೆಬೀಜಗಳು,'ನೀವೆಷ್ಟೆ ಉಪಯುಕ್ತವಾಗಿದ್ದರೂ ನಿಮ್ಮನ್ನು ಕೊಳ್ಳುವುದಕ್ಕೆ ಹಣ ಬೇಕು. ಆದರೆ ನಾವು ಪ್ರಕತಿಯ ಕೊಡುಗೆಗಳು. ಬಡವರ ಬಂಧುಗಳು. ಕಲಿಕೆಗೂ ತುಂಬ ಸಹಕಾರಿ. ನಮಗಿಂತ ಮಿಗಿಲಾರಿಲ್ಲ.' ಎಂದು ಒಮ್ಮತದಿಂದ ಕೇಕೆ ಹಾಕಿದವು.


ಚರ್ಚೆ ತಾರಕಕ್ಕೇರಿ ಕೈಕೈ ಮಿಲಾಯಿಸಿ ಚೆಲ್ಲಾಪಿಲ್ಲಿಯಾಗಿ
ಎಲ್ಲಾ ವಸ್ತುಗಳು ಬಿದ್ದುಬಿಟ್ಟವು.


ಹೊರಗಿನಿಂದ ಬಂದ ರಾಮು, ಎಲ್ಲಾ ವಸ್ತುಗಳು ಕಸದ ರಾಶಿಯಂತೆ ಚಲ್ಲಾಪಿಲ್ಲಿಯಾಗಿ ಬಿದ್ದಿರುವುದನ್ನು ನೋಡಿದ. ಗುಡಿಸಿ ಕಸದ ಬುಟ್ಟಿಯಲ್ಲಿ ಬಿಸಾಕಿದ.

ಕಸದ ಬುಟ್ಟಿಯಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಎಲ್ಲಾ ವಸ್ತುಗಳು ಒಂದೆಡೆ ಸೇರಿ ನಮ್ಮ ಈ ಥರದ ಹೀನಾಯ ಸ್ಥಿತಿಗೆ ನಮ್ಮೊಳಗಿನ ಜಗಳವೇ ಕಾರಣವಾಯಿತು. ನಾವೆಲ್ಲರೂ ಒಂದೇ. ನಾವು ಜಗಳ ಮಾಡುವುದು ಸರಿಯಲ್ಲ. ಎಲ್ಲರೂ ಒಗ್ಗಟ್ಟಾಗಿದ್ದು ಮಕ್ಕಳ ಕಲಿಕೆಗೆ ಸಹಕರಿಸೋಣ ಎಂದು ಮಾತನಾಡಿಕೊಂಡವು.



ರಚನೆ: ಸೋಮು ಕುದರಿಹಾಳ
ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ಶಿಂಗಾಪುರ, ಹಾವೇರಿ
ಮೊ.ನಂ: 9035981798

‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ



ಸಂಪರ್ಕ ಮಾಹಿತಿ
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬,‘ಪುಷ್ಪಾಂಜಲಿ’ ೩ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ-೫೮೦೦೦೭
ಮೊ. ೯೯೮ ೬೬೬ ೧೦೫೫
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.